# ಕೋಟಿವೀರ ದೇವಗನ್



ಬಾಲಿವುಡ್‌ನಲ್ಲಿ ಖಾನ್ ಕುಳಗಳ ಹಾರಾಟ ಏನೇ ಇದ್ದರೂ, ಅವರೆಲ್ಲರಿಗಿಂತ ಭಿನ್ನವಾಗಿ ನಿಲ್ಲುವಾತ ಅಜಯ್ ದೇವಗನ್. ವಯಸ್ಸು ಏರುತ್ತಿದ್ದಂತೆಯೇ ಈತನ ಮಾರ್ಕೆಟ್ ರೇಟ್ ಕೂಡಾ ಏರುತ್ತಿದೆ! ಇತ್ತೀಚಿನವರೆಗೆ 6ರಿಂದ 8 ಕೋಟಿ ರೂಪಾಯಿ ಸಂಭಾವನೆಯ ರೇಂಜ್‌ನಲ್ಲಿದ್ದ ಅಜಯ್ ಇದೀಗ ತನ್ನ ರೇಟನ್ನು 18 ಕೋಟಿ ರೂಪಾಯಿಗೆ ಏರಿಸಿದ್ದಾನೆ. ವಾಸು ಭಗ್ನಾನಿ ಅವರ ಮುಂದಿನ ಚಿತ್ರಕ್ಕೆ ಈಗಾಗಲೆ 18 ಕೋಟಿಗೆ ಅಜಯ್ ಒಪ್ಪಂದ ಮಾಡಿಕೊಂಡಿದ್ದಾನೆ. ಅದೂ 1983ರಲ್ಲಿ ಹಿಟ್ ಆದ 'ಹಿಮ್ಮತ್‌ವಾಲಾ' ಚಿತ್ರದ ರಿಮೇಕ್! ಅಂದ ಕಾಲತ್ತಿಲ್ ಜಿತೇಂದ್ರ ಸೂಪರ್‌ಹೀರೊ ಆಗಿದ್ದಾಗ ತೆರೆಗೆ ಬಂದ ಈ ಚಿತ್ರಕ್ಕೆ ಈಗ ನಿರ್ದೇಶಕ ಸಾಜಿದ್‌ಖಾನ್ ಹೊಸ ಟಚ್ ಕೊಟ್ಟಿದ್ದಾನಂತೆ.

ಅಜಯ್ ದೇವಗನ್ ಮಾರ್ಕೆಟ್ ರೇಟ್ ಒಮ್ಮೆಲೆ ಏರಲು ಕಾರಣ 'ಸಿಂಘಂ' ಚಿತ್ರದ ಅಭೂತಪೂರ್ವ ಯಶಸ್ಸು. ತೆಲುಗಿನ ಅದೇ ಹೆಸರಿನ ಈ ಚಿತ್ರ ಹಿಂದಿಯಲ್ಲಿ ಒಟ್ಟು 100 ಕೋಟಿ ರೂಪಾಯಿ ಲಾಭ ಗಳಿಸಿದೆಯಂತೆ! 'ಪೂರ್ಣ ಆ್ಯಕ್ಷನ್ ಚಿತ್ರಗಳಲ್ಲಿ ಅಜಯ್‌ನನ್ನು ನೋಡುವುದೇ ಒಂದು ಸೊಗಸು' ಎನ್ನುವುದು ಅಭಿಮಾನಿಗಳ ಹೇಳಿಕೆ. ಬಹುಶಃ ಸಲ್ಮಾನ್ ಖಾನ್ ಇತ್ತೀಚೆಗೆ ಈ ರೀತಿಯ ಚಿತ್ರಗಳಲ್ಲಿ ಯಶಸ್ಸು ಗಳಿಸಿದ ಬಳಿಕ ಅಜಯ್ ಕೂಡಾ ಅದೇ ದಾರಿಯಲ್ಲಿ ಮುಂದುವರಿದಿದ್ದಾನೆ.

ಗೋಲ್‌ಮಾಲ್, ಆಲ್ ದಿ ಬೆಸ್ಟ್ ಮುಂತಾದ ಕಾಮಿಡಿ ಚಿತ್ರಗಳಲ್ಲೂ ಮಿಂಚಿರುವ ಅಜಯ್, ಆ್ಯಕ್ಷನ್ ಚಿತ್ರಗಳಿಗೆ ಒತ್ತು ನೀಡಲು ಈಗ ನಿರ್ಧರಿಸಿದ್ದಾನಂತೆ. ಆತನ ಆ್ಯಕ್ಷನ್ ಚಿತ್ರಗಳಿಗೆ ಪ್ರೇಕ್ಷಕರು ಒಂದೇ ಸಮನೆ ಮುಗಿ ಬೀಳುತ್ತಿರುವುದು ನಿರ್ಮಾಪಕರಿಗೂ ಖಚಿತವಾಗಿದ್ದು, ಆತನ ಕಾಲ್‌ಶೀಟ್‌ಗೆ ಕೋಟಿಗಟ್ಟಳೆ ಕೊಡಲು ಅವರು ಹಿಂಜರಿಯುತ್ತಿಲ್ಲ.

■ ಬಿಂದು

